Karnatak Law Society's
Vishwanathrao Deshpande Institute of Technology
(Approved by AICTE, New Delhi. Affiliated to VTU, Belagavi)
(Recognised Under Section 2(f) by UGC, New Delhi)
Udyog Vidya Nagar, Haliyal – 581329, Dist: Uttar Kannada (Karnataka)
Phone: 08284-220861, 220334, 221409, Fax: 08284-220813
www.klsvdit.edu.in principal@klsvdit.edu.in

Date: 30-04-2022

ಪತ್ರಿಕಾ ಪ್ರಕಟಣೆ

## ಆಕಾಶವಾಣಿಯಲ್ಲಿ ಕೆ.ಎಲ್.ಎಸ್ ವಿ.ಡಿ.ಐ.ಟಿ "ಕರುಣಾಳು ಬಾ ಬೆಳಕೆ"

ಕೆ.ಎಲ್.ಎಸ್ ವಿ.ಡಿ.ಐ.ಟಿ ಹಳಿಯಾಳದ ಪ್ರಾಯೋಜಕತ್ವದಲ್ಲಿ ಖ್ಯಾತ ಶಿಕ್ಷಣ ತಜ್ಞರು ಮತ್ತು ಸಾಮಾಜಿಕ ಚಿಂತಕರಾದ ಡಾ. ಗುರುರಾಜ ಕರ್ಜಗಿ ಅವರ ಸುಪ್ರಸಿದ್ಧ ಉಪನ್ಯಾಸ ಮಾಲಿಕೆ "ಕರುಣಾಳು ಬಾ ಬೆಳಕೆ" ಮೇ 1 ರಿಂದ 30 ರ ವರೆಗೆ ಆಕಾಶವಾಣಿ ಧಾರವಾಡ ಕೇಂದ್ರದಿಂದ 30 ಸಂಚಿಕೆಗಳಲ್ಲಿ ಮೂಡಿಬರಲಿದೆ. ಧಾರವಾಡ ಆಕಾಶವಾಣಿ ಕೇಂದ್ರದ 765KHz ಕಂಪನಾಂಕದಲ್ಲಿ ಪ್ರತಿದಿನ ಬೆಳಿಗ್ಗೆ 6:50 ಕ್ಕೆ ಮತ್ತು ಧಾರವಾಡ ವಿವಿಧ ಭಾರತಿ ಕೇಂದ್ರದ ಎಫ್. ಎಮ್ ಕಂಪನಾಂಕ 103 MHz ನಲ್ಲಿ ಪ್ರತಿದಿನ ಬೆಳಿಗ್ಗೆ 9:55ಕ್ಕೆ ಈ ಕಾರ್ಯಕ್ರಮ ಪ್ರಸಾರವಾಗಲಿದೆ.

ಡಾ. ಗುರುರಾಜ ಕರ್ಜಗಿ ಅವರ ಪ್ರಖ್ಯಾತ ಕೃತಿಯಾದ "ಕರುಣಾಳು ಬಾ ಬೆಳಕೆ" ಬಹು ಸಂಖ್ಯೆಯಲ್ಲಿ ಮುದ್ರಣಗೊಂಡಿದ್ದು ವಿದ್ಯಾರ್ಥಿಗಳು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸ್ಫೂರ್ತಿ ನೀಡುವ ಕೃತಿಯಾಗಿದೆ. ಈ ಪುಸ್ತಕ ಆಧಾರಿತ ಉಪನ್ಯಾಸ ಮಾಲಿಕೆ ಐತಿಹಾಸಿಕ ಮತ್ತು ಪ್ರಸ್ತುತ ಘಟನೆಗಳ ಉದಾಹರಣೆಗಳೊಂದಿಗೆ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದಂಥ ಮೌಲ್ಯಗಳನ್ನು ಹೊಂದಿದೆ.

ಮಹಾವಿದ್ಯಾಲಯದ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಡಾ. ಮಹೇಂದ್ರ ಎಮ್ ದೀಕ್ಷಿತ್ ಈ ಕಾರ್ಯಕ್ರಮದ ಸಂಯೋಜಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಕೇಳುಗರು ಈ ಕಾರ್ಯಕ್ರಮದ ಕುರಿತು ಅಭಿಪ್ರಾಯಗಳನ್ನು ವಾಟ್ಸ್ ಆಪ್ ಸಂಖ್ಯೆ 9481731226 ಗೆ ಕಳಿಸಲು ಕೋರಲಾಗಿದೆ. ವಿದ್ಯಾರ್ಥಿಗಳು, ಪಾಲಕರು ಮತ್ತು ಶಿಕ್ಷಕ ವರ್ಗದವರು ಈ ಕಾರ್ಯಕ್ರಮ ಆಲಿಸಿ ಸದುಪಯೋಗ ಪಡೆದುಕೊಳ್ಳಬೇಕೆಂದು ಪ್ರಾಂಶುಪಾಲರಾದ ಡಾ. ವಿ. ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal

